not speaking about the No Confidence Motion. The Motion to suspend the rules is to be moved. That is not moved and carried. How can you suspend the rules?

ಅಧ್ಯಕ್ಷರು : ಸಭಾನಾಯಕರು ಒಪ್ಪಿಕೊಂಡನಂತರ I have taken this decision and we will start the discussion after lunch break at 2.00 O'clock. ಈಗ ಸಭೆ ಮುಂದುವರೆದು ಮತ್ತೆ ಎರಡು ಗಂಟೆಗೆ ಭೇಟಿಯಾಗೋಣ.

(ಸದನವು ಮಧ್ಯಾಹ್ನ 1.08 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ 2 ಗಂಟೆಗೆ ಸಮಾವೇಶಗೊಳ್ಳುವುದಾಗಿ ತೀರ್ಮಾನವಾಯಿತು)

ಸದನವು ಪುನಃ ಮಧ್ಯಾಹ್ನ 2-35ಕ್ಕೆ ಪ್ರಾರಂಭವಾಯಿತು.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

ವಿಷಯ :- ರಾಯಚೂರು ನಗರದಲ್ಲಿ ಮಳೆಯ ಅನಾಹುತದಿಂದ ಬಹಳ ತೊಂದರೆಯುಂಟಾಗಿರುವ ಬಗ್ಗೆ.

ಶ್ರೀ ಎಂ.ಎಸ್. ಪಾಟೀಲ್(ಸಂಕೇಶ್ವರ) :- ಮಾನ್ಯ ಅಧ್ಯಕ್ಷರೇ, ಈಗ ಬಹಳ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೀರಿ, ನಾನು ಅದಕ್ಕೆ ತೊಂದರೆ ಕೊಡತಕ್ಕಂಥ ಅವಶ್ಯಕತೆ ಇಲ್ಲ. ಆದರೆ ನಮ್ಮ ರಾಯಚೂರು ನಗರದಲ್ಲಿ ನಿನ್ನೆ ಮಳೆಯ ಅನಾಹುತದಿಂದ ಬಹಳ ನಷ್ಟಕ್ಕೆ ಒಳಗಾಗಿದೆ. ಸರ್ಕಾರದ ಕಡೆಯಿಂದ ಒಂದು ಹೇಳಿಕೆಯನ್ನು ನಾನು ನಿರೀಕ್ಷಣೆ ಮಾಡುತ್ತೇನೆ. ಸುಮಾರು 5ಸಾವಿರ ಮನೆಗಳು ಬಿದ್ದುಹೋಗಿ 20ಸಾವಿರ ಜನರು ನಿರ್ಗತಿಕರಾಗಿದ್ದಾರೆ. ಇಂಥ ಒಂದು ತೊಂದರೆ ಆ ನಗರದಲ್ಲಿ ಆಗಿರತಕ್ಕಂಥ ಘಟನೆಯಾಗಿದೆ. ಈ ವಿಷಯವನ್ನು ಹೆಚ್ಚಿಗೆ ಪ್ರಸ್ತಾಪ ಮಾಡತಕ್ಕಂಥ ಅವಶ್ಯಕತೆ ಇಲ್ಲ, ಸರ್ಕಾರದ ಕಡೆಯಿಂದ ಏನು ಕ್ರಮ ತೆಗೆದುಕೊಂಡಿರುತ್ತಾರೆ ಎನ್ನತಕ್ಕಂಥದ್ದನ್ನು ಅವರು ಹೇಳಿಕೆಯ ಮೂಲಕ ಹೇಳಲಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್‌ನಾಗರಾಜ್(ಚಾಮರಾಜನಗರ) :- ಮಾನ್ಯ ಅಧ್ಯಕ್ಷರೇ, 5000 ಮನೆಗಳು ಮಳೆ ನೀರಿಗೆ ಆಹುತಿಯಾಗಿವೆ ಎನ್ನುವ ಪ್ರಶ್ನೆ ಬಂದಿರುವುದರಿಂದ ಸರ್ಕಾರ ಈ ಕೂಡಲೇ ತೆಗೆದುಕೊಂಡಿರತಕ್ಕಂಥ ಕ್ರಮಗಳೇನು? ನನಗನಿಸುತ್ತದೆ ಅಲ್ಲಿಂದ ಟೆಲಿಗ್ರಾಮಗಳು ಬರುತ್ತಿವೆ, ಅಲ್ಲಿಂದ ಜನರು ಮಾತನಾಡುತ್ತಿದ್ದಾರೆ, ಅವರ ಕಷ್ಟ ಹೇಳುತ್ತಿದ್ದಾರೆ. ಆದರೂ ಇದುವರೆವಿಗೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ರಾಯಚೂರಿನಲ್ಲಿ ಮಳೆಯ ಅನಾಹುತದಿಂದ 5000 ಮನೆಗಳು ಅಂದರೆ 20 ಸಾವಿರ ಕುಟುಂಬಗಳು ಬೀದಿಪಾಲಾಗಿದ್ದಾವೆ. ಈ ಪರಿಸ್ಥಿತಿಯಲ್ಲಿ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಅತ್ಯಂತ ಪ್ರಮುಖವಾಗಿ ನಾವು ಕೇಳುತ್ತಿರುವ ಪ್ರಶ್ನೆಯಾಗಿದೆ. ಆದ್ದರಿಂದ ಇವತ್ತೇ ಸರ್ಕಾರದವರು ಕೈಗೊಂಡಿರತಕ್ಕಂಥ ಕ್ರಮಗಳೇನು ಎಂಬುದನ್ನು ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) :- ಮಾನ್ಯ ಅಧ್ಯಕ್ಷರೇ, ಬೇರೆಬೇರೆ ಜಿಲ್ಲೆಗಳಲ್ಲಿಯೂ ಕೂಡ 24 ಗಂಟೆಗಳಕಾಲ ಸತತವಾಗಿ ಮಳೆಯಾಗಿ ಅನಾಹುತಕ್ಕೆ ಒಳಪಟ್ಟಿವೆ. ಬೇರೆ ಬೇರೆ ಜಿಲ್ಲೆಗಳಲ್ಲಿಯೂ ಈ ರೀತಿ ಅನಾಹುತಗಳಾಗಿವೆ. ಅನೇಕರು ತಮ್ಮ ಮನೆಗಳನ್ನು

ಕಳೆದುಕೊಂಡಿರುತ್ತಾರೆ, ಇವರೆಲ್ಲರಿಗೂ ತಕ್ಷಣ ಪರಿಹಾರವನ್ನು ಒದಗಿಸಬೇಕು. ಅಲ್ಲಿಯಂತೂ ಬಹಳವಾಗಿ ಅನಾಹುತವಾಗಿದೆ. ಆದ್ದರಿಂದ ಎಲ್ಲಕಡೆಗೂ ಸಮಗ್ರವಾಗಿ ಪರಿಹಾರವನ್ನು ಕೊಡುವುದಕ್ಕೆ ತಾವು ಏನಾದರೂ ಒಂದು ಯೋಚನೆ ಮಾಡಬೇಕು.

ಶ್ರೀ ಆರ್.ವಿ ದೇಶಪಾಂಡೆ (ವಿರೋಧಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ರಾಯಚೂರಿನಲ್ಲಿ ಮುಂಜಾನೆ ಮೂರುವರೆಯಿಂದ ಏಳುವರೆ ಗಂಟೆಗಳ ತನಕ ಭಾರಿ ಮಳೆಯಾಗಿದೆ. ರಾಯಚೂರಿನಲ್ಲಿ 8 ಸೆಂಟಿಮೀಟರ್, ಗಂಗಾವತಿಯಲ್ಲಿ 8 ಸೆಂಟಿಮೀಟರ್, ಸಿಂಧನೂರಿನಲ್ಲಿ 7.1 ಹೀಗೆ ಭಾರಿ ಮಳೆಯಾಗಿ ಈಗಾಗಲೇ ನಮ್ಮ ಸ್ನೇಹಿತರು ಹೇಳಿದಹಾಗೆ ಸಾಧಾರಣವಾಗಿ 4-5 ಸಾವಿರ ಮನೆಗಳು ಬಿದ್ದುಹೋಗಿವೆ. ಇವತ್ತು 20 ಸಾವಿರ ಜನರು ಬೀದಿಪಾಲಾಗಿದ್ದಾರೆ. ಅಷ್ಟೇ ಅಲ್ಲ, ಸರ್ಕಾರದಿಂದ ಯಾವ ಕೆಲಸವೂ ನಡೆಯುತ್ತಿಲ್ಲ. ಇನ್ನೂ ಅಲ್ಲಿ ಗಂಜಿಕೇಂದ್ರಗಳನ್ನು ತೆಗೆದಿಲ್ಲ. ಈ ಮಳೆಯಿಂದಾಗಿ ಮನೆಯಲ್ಲಿದ್ದ ವಸ್ತುಗಳು ಬಟ್ಟೆ ಇರಬಹುದು, ಪಾತ್ರೆಗಳಿರಬಹುದು ಅವರ ಆಹಾರ ಸಾಮಗ್ರಿಗಳು ಇರಬಹುದು, ಎಲ್ಲ ಕೊಚ್ಚಿಕೊಂಡು ಹೋಗಿವೆ. ಇದಲ್ಲದೆ ಕೆಲವಾರು ಜನರು ಸಹ ಈ ಭಾರಿ ಮಳೆಯಿಂದ ತೀರಿಕೊಂಡಿದ್ದಾರೆಂಬ ಸುದ್ದಿಯೂ ಕೂಡ ಬಂದಿದೆ. ಮತ್ತು ಕಾಲರ ಅಲ್ಲಿ ಹರಡಬಹುದೆಂಬ ಸುದ್ದಿಯೂ ಇದೆ. ಆದ್ದರಿಂದ ಸರ್ಕಾರದ ಎಲ್ಲ ಇಲಾಖೆಗಳು ಇವತ್ತು ಬಹಳ ಚುರುಕಾಗಿ ಕೆಲಸ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಸರ್ಕಾರ ಎಲ್ಲ ವಿಧವಾದ ಕ್ರಮ ತೆಗೆದುಕೊಳ್ಳಬೇಕು. ಮತ್ತೊಂದು ಭಯವಿರುವುದೇನೆಂದರೆ ಅಲ್ಲಿ ಸುಂತಾಪುರ ಕೆರೆ ಎಂದು ಇದೆ, ಅದು ಬ್ರೀಚ್ ಆಗುತ್ತಿದೆ ಎಂದು ತಿಳಿದಿದೆ. ಒಂದು ವೇಳೆ ಅದು ಬ್ರೀಚ್ ಆದರೆ 6-7 ಹಳ್ಳಿ ಜನರ ಮೇಲೆ ಪರಿಣಾಮವಾಗಬಹುದು. ಆದ್ದರಿಂದ ಸರ್ಕಾರದವರು ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಅಲ್ಲಿಯ ಜನರನ್ನು ಶಿಫ್ಟ್ ಮಾಡತಕ್ಕಂಥ ಕ್ರಮ ಸರ್ಕಾರದಿಂದ ಆಗಬೇಕಾಗಿದೆ. ರಾಯಚೂರಿನ ಜಿಲ್ಲಾಧಿಕಾರಿಗಳವರೊಡನೆ ನಾನು ಇಂದು ಮಾತನಾಡಿದೆ. ಅವರ ಪ್ರಕಾರವಾಗಿ ಮುಖ್ಯವಾಗಿ ಇದಕ್ಕೆ ಕಾರಣವೇನೆಂದರೆ, ಮಳೆಯಾಗಿದೆ ಅದು ನ್ಯಾಚ್ಯುರಲ್, ಇದು ಅವರ ಕೈಯಲ್ಲಿಲ್ಲ. ಆದರೆ ರಾಯಚೂರ್ ನಗರ ಸಭೆಯ ಕೌನ್ಸಿಲ್‌ನ ಸರಹದ್ದಿನಲ್ಲಿ ಬರುವ ಟ್ಯಾಂಕ್‌ಬಂಡ್ಸ್ ಕೆರೆಯಲ್ಲಿ ಎನ್‌ಕ್ರೋಚ್ ಮಾಡಿ ಮನೆಗಳನ್ನು ಕಟ್ಟಿದ್ದಾರೆ. ಕೆಲವು ಟಾಯ್‌ಲೆಟ್‌ಗಳನ್ನು ಕಟ್ಟಿದ್ದಾರೆ. ಮಳೆ ಏನು ಬಂತು, ಅದರ ಫ್ಲೋ ಸರಿಯಾಗಿ ಹೋಗಲು ಡ್ರೈನೇಜ್ ಮಾಡಲಿಲ್ಲ. ಇದು ಒಂದು ಕಾರಣವಾಗಿದೆ. ಅಲ್ಲಿ ನಗರ ಸಭೆಯ ಕೌನ್ಸಿಲ್ ಇದ್ದರೂ ಸಹ ಸರ್ಕಾರವೂ ಕೂಡ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಏತಕ್ಕೆಂದರೆ ಇಷ್ಟೊಂದು ಅನಾಹುತಕ್ಕೆ ಅವರೂ ಕಾರಣರಾಗಿರುತ್ತಾರೆ. ತಕ್ಷಣ ಪರಿಹಾರ ಕೊಡಬೇಕಾಗುತ್ತದೆ. ಯಾರ ಆಸ್ತಿಗಳಿಗೆ ಡ್ಯಾಮೇಜ್ ಆಗಿದೆ, ಅದರ ಅಸೆಸ್‌ಮೆಂಟ್ ಕೆಲಸ ಇನ್ನು ಶುರುವಾಗಿಲ್ಲ. ಆ ಪ್ರಾಪರ್ಟಿ ಅಸೆಸ್‌ಮೆಂಟ್ ಶುರುವಾಗಬೇಕು, ಆ ದೃಷ್ಟಿಯಿಂದ ಸರ್ಕಾರ ಎಲ್ಲ ಹಂತದಲ್ಲಿ ವೈದ್ಯಕೀಯ ಸೌಕರ್ಯದಲ್ಲಿಯಾಗಲೀ, ಆರ್ಥಿಕ ನೆರವು ಆಗಲಿ, ಗಂಜಿಕೇಂದ್ರಗಳಾಗಲೀ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ನಾನು ಮುಖ್ಯಮಂತ್ರಿಗಳಲ್ಲಿ ಒತ್ತಾಯಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ರೆವಿನ್ಯೂ ಅಧಿಕಾರಿಗಳನ್ನು ಕಳುಹಿಸಿಕೊಡಿ, ಅಥವಾ ರೆವಿನ್ಯೂ ಮಂತ್ರಿಗಳಾದರೂ ಹೋಗಲಿ. ಅಥವಾ ಯಾರಾದರು ಸಚಿವರನ್ನು ಕಳುಹಿಸಿ ತಕ್ಷಣ ವರದಿ ತರಿಸಿ.

ಶ್ರೀ ವಾಟಾಳ್‌ನಾಗರಾಜ್ : – 20 ಸಾವಿರ ಕುಟುಂಬಗಳು ಬೀದಿ ಪಾಲಾಗಿರುವಾಗ ಯಾರೋ ಒಬ್ಬ ಅಧಿಕಾರಿ ಹೋಗುವುದಲ್ಲ. ಅಲ್ಲಿಗೆ ಮುಖ್ಯಮಂತ್ರಿಗಳೇ ಹೋಗಬೇಕು. ಹೋಗಿ ನೋಡಿ ಪರಿಶೀಲನೆ ಮಾಡಬೇಕು. ಕೂಡಲೇ ಪರಿಹಾರ ಕೊಡುವುದಕ್ಕೆ ಮುಖ್ಯಮಂತ್ರಿಗಳು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ವಿಜಯಕುಮಾರ್ ಶೆಟ್ಟಿ : – ಕ್ರಮ ಕೈಗೊಳ್ಳುವುದಲ್ಲ, ಏನು ಪರಿಹಾರ ಕೊಡುತ್ತಾರೆಂದು ನಿಖರವಾಗಿ ಹೇಳಬೇಕು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮೀನುಗಾರಿಕೆ ವಿಚಾರ...

ಅಧ್ಯಕ್ಷರು : ಈಗ ಆ ಪ್ರಸ್ತಾವನೆ ಇಲ್ಲ, ಕುಳಿತುಕೊಳ್ಳಿ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : – ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1700 ಎಕರೆ ಜಾಗವನ್ನು ಆಕ್ಟೈರ್ ಮಾಡುತ್ತಿದ್ದಾರೆ. ಅಲ್ಲಿನ ಮೀನುಗಾರರ ಸಮಸ್ಯೆ ಬಗ್ಗೆ ಮೊನ್ನೆ ನಿಯಮ 334ರ ಕೆಳಗೆ ನೋಟೀಸನ್ನು ಕಳುಹಿಸಿದ್ದೇನೆ. ಕುಂದಾಪುರದಲ್ಲಿ ಹೊಳೆ ಮೀನುಗಾರಿಕೆ ಮಾಡತಕ್ಕ ಸಾವಿರಾರು ಮೀನುಗಾರರ ಸಮಸ್ಯೆ ಉದ್ಭವವಾಗಿದೆ. ಬಹಳಷ್ಟು ಮೀನುಗಾರರು ತೊಂದರೆ ಅನುಭವಿಸುತ್ತಿದ್ದಾರೆ. ಇದಕ್ಕೆ ಸರ್ಕಾರದ ವತಿಯಿಂದ ಉತ್ತರ ಬೇಕಾಗಿದೆ. ಮೀನುಗಾರಿಕಾ ರಾಜ್ಯ ಸಚಿವರು ಕುಂದಾಪುರಕ್ಕೆ ಭೇಟಿ ಕೊಟ್ಟಿದ್ದಾರೆ. ಮೀನುಗಾರರಿಗೆ ಏನಾದರೂ ಪರಿಹಾರ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟು ಬಂದಿದ್ದಾರೆ. ಮೀನುಗಾರಿಕೆಯನ್ನು ಅವಲಂಬಿಸಿರತಕ್ಕ ಸಾವಿರಾರು ಮೀನುಗಾರರ ಸಮಸ್ಯೆ ಬಗ್ಗೆ ಸರ್ಕಾರದಿಂದ ಉತ್ತರವನ್ನು ಈ ಸದನದ ಮೂಲಕ ನಿರೀಕ್ಷಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ(ಮುಖ್ಯಮಂತ್ರಿಗಳು) : – ಮಾನ್ಯ ಅಧ್ಯಕ್ಷರೇ, ರಾಯಚೂರಿನ ಬಗ್ಗೆ ತಾವು ಈಗಲೇ ಹೇಳಿಕೆ ಕೊಡಬೇಕೆಂದರೆ ಕೊಡುತ್ತೇನೆ. ಮೂರೂವರೆ ಗಂಟೆಗಳ ಕಾಲ 31ರಂದು ಬೆಳಿಗ್ಗೆ ವಿಪರೀತಮಳೆ ಬಂದು 20 ಕೊಳಚೆ ಪ್ರದೇಶಗಳು ನೀರಿನಲ್ಲಿ ಮುಳುಗಿ ಹೋಗಿವೆ. ಜನಗಳನ್ನು ಸುರಕ್ಷಿತವಾದ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ. ಐದು ಬೇರೆಬೇರೆ ಕ್ಯಾಂಪುಗಳನ್ನು ಮಾಡಿದ್ದೇವೆ ಮತ್ತು ಅವರಿಗೆ ಬೇಕಾದ ಆಹಾರ ಸಾಮಗ್ರಿಗಳನ್ನು ಒದಗಿಸಲಾಗಿದೆ. ಮತ್ತು ಆರೋಗ್ಯವನ್ನು ನೋಡಿಕೊಳ್ಳುವುದಕ್ಕೂ ಕೂಡಾ, ಸಾಕಷ್ಟು ಚಿಕಿತ್ಸಾ ಸೌಕರ್ಯ ಹಾಗೂ ಇನ್ನಿತರೆ ಸೌಕರ್ಯಗಳನ್ನು ಒದಗಿಸಬೇಕಾಗಿದೆ. ಅಲ್ಲಿ ಮರಣ ಆದ ಸುದ್ದಿ ಬಂದಿಲ್ಲ. ನೀರನ್ನು ಹೊರತೆಗೆಯುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಅಲ್ಲಿ ನೀರು ಕಡಿಮೆ ಆಗುತ್ತಿದೆ. ಮತ್ತು ಎಲ್ಲಾ ರೀತಿಯ ಮುನ್ನೆಚ್ಚರಿಕೆ ತೆಗೆದುಕೊಳ್ಳಲಾಗಿದೆ. ಮತ್ತು ತಕ್ಷಣ ಇವರಿಗೆ ಸಹಾಯ ಆಗಬೇಕೆಂದು ಒಂದು ಕೋಟಿ ರೂಪಾಯಿಗಳನ್ನು ನಾವು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ್ದೇವೆ. ಆದರಲ್ಲಿ ತಕ್ಷಣಕ್ಕೆ ಬೇಕಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಈಗ ಅಲ್ಲಿ ಮೂರು ಟ್ಯಾಂಕ್‌ಗಳು ಬ್ರೀಚ್ ಆಗತಕ್ಕ ಭಯದ ಸಂಗತಿ ಇದೆ. ಅಲ್ಲಿನ ಜಿಲ್ಲಾಧಿಕಾರಿಗಳು ಜಿಲ್ಲೆಗೆ ಸಂಬಂಧಪಟ್ಟ ಅಧಿಕಾರಿಗಳು ಆ ಲೀಕೇಜ್ ತುಂಬುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ರಾಯಚೂರು ಜಿಲ್ಲೆಯ ಗ್ರಾಮಾಂತರ ಭಾಗದಲ್ಲಿ ಸುಮಾರು 80 ಗುಡಿಸಲುಗಳು ಸಂಪೂರ್ಣ ಕೊಚ್ಚಿಹೋಗಿವೆ. ಸಿಂಧನೂರು ತಾಲ್ಲೂಕು ನಾಗಲಾಪುರದಲ್ಲಿ ಇಬ್ಬರು ನೀರಿನಲ್ಲಿ ಕೊಚ್ಚಿಹೋಗಿದ್ದಾರೆ. ಇನ್ನೂ ಕೂಡಾ ಹುಡುಕುವುದಕ್ಕೆ ಆಗಿಲ್ಲ. ಡೆಡ್ ಬಾಡಿಗಳು ಕೂಡಾ ಸಿಕ್ಕಿಲ್ಲ. ಇನ್ನು ಮುಂದೆ ಬರತಕ್ಕ ವರದಿಯನ್ನು ಇವತ್ತು ಅಥವಾ ನಾಳೆ ಕೊಡುತ್ತೇವೆ. ಕಂದಾಯ ಮಂತ್ರಿಗಳು ಅಥವಾ ಆ ಜಿಲ್ಲೆ ಉಸ್ತುವಾರಿ ಸಚಿವರು

ತಕ್ಷಣವೇ ಕಂದಾಯ ಆಯುಕ್ತರ ಜೊತೆಯಲ್ಲಿ ಅಲ್ಲಿಗೆ ಹೋಗುವುದಕ್ಕೆ ಈಗಾಗಲೇ ನಾನು ವಿನಂತಿ ಮಾಡಿಕೊಂಡಿದ್ದೇನೆ. ಇನ್ನು ಪ್ರತಾಪಚಂದ್ರಶೆಟ್ಟಿಯವರು ಕೇಳಿದ ವಿಚಾರದಲ್ಲಿ ಮೀನುಗಾರಿಕಾ ಸಚಿವರು ಉತ್ತರ ಕೊಡುತ್ತಾರೆ. ಇನ್ನು ಶ್ರೀ ವಿಜಯಕುಮಾರ್ ಶೆಟ್ಟಿಯವರು ಹೇಳಿದಹಾಗೆ ಮಳೆಗಾಲದಲ್ಲಿ ಅವರಿಗೆಲ್ಲಾ ಆ ಪ್ರದೇಶದಿಂದ ಸ್ಥಳಾಂತರಿಸಿದರೆ ಸಾಕಷ್ಟು ತೊಂದರೆ ಆಗುತ್ತದೆ. ಆದ್ದರಿಂದ ಜಿಲ್ಲಾಧಿಕಾರಿಗಳಿಗೆ ತಾವು ಕೊಟ್ಟಂತಹ ಸೂಚನೆಯನ್ನು ಈಗಾಗಲೇ ಕೊಟ್ಟಿದ್ದೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ : – ಮಾನ್ಯ ಅಧ್ಯಕ್ಷರೇ, ಅಲ್ಲಿ ಪರಿಹಾರಧನ ಇನ್ನೂ ಕೊಟ್ಟಿಲ್ಲ. ಪರಿಹಾರ ಕೊಡುವ ಮೊದಲೇ ಮೊನ್ನೆ 400 ಜನ ಪೋಲೀಸರು ಅಲ್ಲಿಗೆ ಬುಲ್ಡೋಜರ್ ತೆಗೆದುಕೊಂಡು ಬಂದು ಎಲ್ಲರನ್ನೂ ಎಬ್ಬಿಸುವಂತಹ ಕಾರ್ಯ ಹಮ್ಮಿಕೊಂಡಿದ್ದರು. ಇದು ಸುಮಾರು ಒಂದು ಸಾವಿರಕ್ಕಿಂತ ಹೆಚ್ಚು ಫ್ಯಾಮಿಲೀಸ್ ಕಷ್ಟಪಡುತ್ತಿರುವಂತಹ ಒಂದು ಪ್ರಶ್ನೆ. ನಾನು ಇದನ್ನು ಪ್ರಸ್ತಾಪಿಸಲು ಮೂರು ದಿವಸದಿಂದ ಪ್ರಯತ್ನ ಮಾಡುತ್ತಿದ್ದೇನೆ. ತಾವು ಅವಕಾಶವೇ ಕೊಡುತ್ತಾ ಇಲ್ಲ. ಮಾನ್ಯ ಉಪಾಧ್ಯಕ್ಷರು ಇದ್ದರು, ಅವರು ಉತ್ತರ ಕೊಡಿಸುತ್ತೇನೆಂದು ಹೇಳಿದ್ದರು; ಉತ್ತರ ಕೊಟ್ಟಿಲ್ಲ. ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆಯಾದ್ದರಿಂದ ತಾವು ನನಗೆ ಒಂದು ನಿಮಿಷವಾದರೂ ಅವಕಾಶ ಕೊಡಬೇಕು. ಏಕೆಂದರೆ ಅಲ್ಲಿ 611 ಕುಟುಂಬಗಳು ಇವೆ. ಸುಮಾರು 400 ಪೋಲೀಸರು ಬಂದು ಮೊನ್ನೆ ಶುಕ್ರವಾರ ಅವರನ್ನು ಎಬ್ಬಿಸುವಂತಹ ಕಾರ್ಯಕ್ರಮವನ್ನು ಹಾಕಿದ್ದರು.

ಶ್ರೀ ಬಿ.ಎಸ್.ಯಡಿಯೂರಪ್ಪ : – ರಾಯಚೂರಿನ ಬಗ್ಗೆ ಏನೋ ಅವಕಾಶ ಕೊಟ್ಟೆವು. ಬೆಳಿಗ್ಗೆ ಎದ್ದರೆ ಮುಖ್ಯಮಂತ್ರಿಗಳು ದಕ್ಷಿಣ ಕನ್ನಡದಲ್ಲಿ ಇರುತ್ತಾರೆ.

ಶ್ರೀ ವಿಜಯಕುಮಾರ್ ಶೆಟ್ಟಿ : – ಸದನದ ವೇಳೆಯನ್ನು ಇಡೀ ದಿವಸ ಅವರೇ ಉಪಯೋಗಿಸುತ್ತಾರೆ. ನಮಗೆ ಮಾತನಾಡುವುದಕ್ಕೆ ಅವರು ಅವಕಾಶವನ್ನೇ ಕೊಡುವುದಿಲ್ಲ.

ಅಧ್ಯಕ್ಷರು : – ನಾಳೆ ಅವಕಾಶ ಮಾಡಿಕೊಡುತ್ತೇನೆ. ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎಂ.ಇದಿನಬ್ಬ : – ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮೀನಿನ ಮೇಲೆ ಬೊಕ್ಕೆಗಳು ಕಾಣಿಸಿಕೊಳ್ಳುತ್ತಿದ್ದು, ಅದನ್ನು ತಿಂದರೆ ರೋಗ ಬರುತ್ತದೆಂದು ಮೀನುಗಾರರು ಬೊಬ್ಬೆ ಹೊಡೆಯುತ್ತಿದ್ದಾರೆ.

ಶ್ರೀ ಕೆ.ಪ್ರತಾಪ್ ಚಂದ್ರಶೆಟ್ಟಿ : – ನನ್ನ ಪ್ರಶ್ನೆಗೆ ಉತ್ತರ ಇಲ್ಲ.

ಅಧ್ಯಕ್ಷರು : – ನಾನು ಅವಕಾಶ ಮಾಡಿಕೊಡುತ್ತೇನೆ. ತಾವು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಡಿ.ಎ. ಚಿನ್ನಪ್ಪ(ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು) : – ಮಾನ್ಯ ಅಧ್ಯಕ್ಷರೇ, ಈಗ ನಾನು...

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್ : – ಗ್ಯಾನೈಟ್ ಬಗ್ಗೆ ಏನು ಅವರು ಹೇಳುತ್ತಿದ್ದಾರೆ ಅದಕ್ಕೆ ನಾವು ಅವಕಾಶ ಕೊಡುವುದಿಲ್ಲ. ಏನು ಸಮಿತಿ ಮೂಲಕ ವರದಿ ತಯಾರು ಮಾಡಲಾಗಿದೆ, ಅದು ಮೋಸದ ವರದಿ.

ಶ್ರೀ ಬಾಬಾಗೌಡ ಪಾಟೀಲ್ : – ನಾವು ಅದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : – ಅದನ್ನು ಅವರು ಸಭೆ ಮುಂದೆ ಮಂಡಿಸಬಾರದು.

ಶ್ರೀ ಸಿ. ಬೈರೇಗೌಡ : – ಅದನ್ನು ಈಗ ಮಂಡಿಸಬಾರದು.

ಶ್ರೀ ವಾಟಾಳ್‌ನಾಗರಾಜ್ :- ಗ್ರಾನೈಟ್ ಲೂಟಿಕೋರರ ಪರವಾಗಿ ನೀವು ಇದ್ದೀರಿ. ಮೊದಲಿನಿಂದಲೂ ತಾವು ಖಾಸಗಿಯವರ ಪರ ಇದ್ದೀರಿ. ಈ ಸದನದಲ್ಲಿ ಗ್ರಾನೈಟ್ ಬಗ್ಗೆ ನಡೆದ ಚರ್ಚೆ ಏನು? ಇದಕ್ಕೆ ನೇಮಕ ಮಾಡಿದ ಸಮಿತಿಯ ಉದ್ದೇಶ ಏನು? ಈ ಉದ್ದೇಶಕ್ಕೆ ತಾವು ಭಂಗ ತಂದಿದ್ದೀರಿ. ಮೋಸದ ವರದಿ ಅದು. ಲೂಟಿಕೋರರ ಪರ ನೀವು ಇದ್ದೀರಿ. ನೀವು ಹೇಳಿಕೆ ಕೊಡುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು :- ಮಾನ್ಯ ವಾಟಾಳ್‌ನಾಗರಾಜ್‌ರವರೆ, ತಾವು ಕುಳಿತುಕೊಳ್ಳಿ. ಅವರು ಚರ್ಚೆ ಪ್ರಾರಂಭ ಮಾಡಲಿ.

ಶ್ರೀ ವಾಟಾಳ್‌ನಾಗರಾಜ್ : ನೀವು ಮೊದಲಿನಿಂದಲೂ ಖಾಸಗಿಯವರ ಪರ ಇದ್ದೀರಿ.

ಶ್ರೀ ಡಿ.ಎ. ಚಿಣ್ಣಪ್ಪ :-ನಾನು ವರದಿಯನ್ನು ಮಂಡಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ :- ನಾಳೆ ಸರ್ಕಾರ ಹೋಗುತ್ತದೆನ್ನುವ ಭಯವೇನು ನಿಮಗೆ?

ಶ್ರೀ ವಾಟಾಳ್‌ನಾಗರಾಜ್ :- ಈ ಸದನದಲ್ಲಿ ಗ್ರಾನೈಟ್ ಬಗ್ಗೆ ನಡೆದ ಚರ್ಚೆಯೇನು? ಅದಕ್ಕೆ ನೇಮಕವಾದ ಸಮಿತಿಯ ಉದ್ದೇಶವೇನು? ಆ ಉದ್ದೇಶಕ್ಕೆ ನೀವು ಭಂಗ ತಂದಿದ್ದೀರಿ.

ಶ್ರೀ ಡಿ.ಎ.ಚಿಣ್ಣಪ್ಪ : ನಾನು ವರದಿಯನ್ನು ಮಂಡಿಸುತ್ತೇನೆ.

ಶ್ರೀ ವಾಟಾಳ್‌ನಾಗರಾಜ್ :- ನಿಮ್ಮ ವರದಿಯನ್ನು ನಾನು ಸುಡುತ್ತೇನೆ. ಇದು ಸರಿಯಲ್ಲ ಮೋಸದ ವರದಿ ಅದು.

ಶ್ರೀ ಸಿ.ಬೈರೇಗೌಡ :-ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರತಕ್ಕದ್ದು ಅಂದರೆ ಇವತ್ತು ನಾವು ಚರ್ಚೆಗೆ ತೆಗೆದುಕೊಂಡಿರತಕ್ಕದ್ದು ಅವಿಶ್ವಾಸ ನಿರ್ಣಯ. ಅದರ ಮಧ್ಯೆ ಯಾವುದೂ ಬರಬಾರದು ಎನ್ನುವುದು it gets precedence over all other business of the House. That is according to our Rules of Procedure. All and Sundry things are being discussed. The No Confidence Motion loses its significance. ನಾವು ಧಿನಾ ಬೆಳಿಗ್ಗೆ ಎದ್ದರೆ ಈ ಮೋಷನ್ ಬಗ್ಗೆ ಚರ್ಚೆ ಮಾಡತಕ್ಕದ್ದಲ್ಲ. ಇದನ್ನು ನಾವು ದಿನನಿತ್ಯ ತರತಕ್ಕದ್ದು ಕೂಡ ಅಲ್ಲ. ಇದಕ್ಕೆ ನೀತಿ ನಿಬಂಧನೆಗಳಿವೆ. ಅದಕ್ಕೆ ವಿರುದ್ಧವಾದ ರೀತಿಯಲ್ಲಿ ತಾವು ಈ ನಡವಳಿಕೆಗಳನ್ನು ಸದನದಲ್ಲಿ ನಡೆಯುವುದಕ್ಕೆ ದಯವಿಟ್ಟು ಅವಕಾಶ ಕೊಡಬಾರದೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ವಿರೋಧಪಕ್ಷದ ನಾಯಕರಾದ ದೇಶಪಾಂಡೆಯವರೇ ತಾವು ಶುರು ಮಾಡಿ.

ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ

ವಿಷಯ :- "ಈ ಸದನವು ಶ್ರೀ ಎಂ.ವೀರಪ್ಪಮೊಯಿಲಿ ಅವರ ಸಚಿವ ಸಂಪುಟದ ಮೇಲೆ ಅವಿಶ್ವಾಸವನ್ನು ಸೂಚಿಸುತ್ತದೆ".

ಶ್ರೀ ಆರ್.ವಿ. ದೇಶಪಾಂಡೆ (ವಿರೋಧಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೇ, ಅವಿಶ್ವಾಸ ನಿರ್ಣಯವನ್ನು ಇವತ್ತು ವಿರೋಧಪಕ್ಷಗಳೆಲ್ಲ ಸೇರಿ ಏನು ಮಂಡಿಸಿದ್ದೇವೆ ಅದಕ್ಕೆ ತಾವು ಅನುಮತಿಯನ್ನು ಕೊಟ್ಟಿದ್ದೀರಿ. ಇದು ವಿರೋಧಪಕ್ಷದ ಕೊನೆಯ ಅಸ್ತ್ರವೆಂದು ನನಗೆ ಗೊತ್ತು. It